ಯಾರೂ ಗಮನಿಸದ ವ್ಯಕ್ತಿಗಳ ಬಗ್ಗೆ ಹೇಳಿದರೆ ಎಲ್ಲರ ಗಮನ ಸೆಳೆದ ವ್ಯಕ್ತಿಗಳ ಬಗ್ಗೆಯೂ ಹೇಳುವುದು ನ್ಯಾಯ. ಅದು ಊರಿನಲ್ಲೇ ಇರುವ ಏಕಮೇವಾದ್ವಿತೀಯ ನ್ಯಾಶನಲ್ ಫೋಟೊ ಸ್ಟುಡಿಯೊದ ಮೆಹಬೂಬ. ಅವನು ಇಪ್ಪತ್ತಾರರ ಸುಂದರ ತರುಣ. ಯಾವಾಗಲೂ ಬಿಳಿಯ ಶರಟು, ಜೀನ್ಸ್ ಪ್ಯಾಂಟು ಹಾಕಿ ನಯವಾಗಿ ಗಡ್ಡ ಹೆರೆದು ಗೆರೆ ಮೀಸೆಯನ್ನು ತಿದ್ದಿ ಸುತ್ತಾಡುವುದು ಅವನ ಹವ್ಯಾಸ. ಒಂದು ಕಾಲದಲ್ಲಿ ದುಬಾಯಿಗೂ ಹೋಗಿ ಬಂದಿದ್ದನಂತೆ. ಇವತ್ತಂತೂ ಅವನು ತುಸು ಹೆಚ್ಚೇ ಅಲಂಕಾರ ಮಾಡಿ ಕಿವಿಯಲ್ಲೊಂದು ಸೆಂಟಿನಲ್ಲಿ ಅದ್ದಿದ ಹತ್ತಿಯ ಉಂಡೆಯನ್ನು ಇಟ್ಟು ಅತ್ತಿತ್ತ ಓಡಾಡುವಾಗ ಅದರ ಸುವಾಸನೆ ಎಲ್ಲರ ಮೂಗುಗಳನ್ನೂ ಅರಳಿಸುತ್ತಿತ್ತು. ಅವನು ಗಂಡಸರು ಹೆಂಗಸರೆನ್ನದೇ ಫೋಟೊಗಳನ್ನು ಹೊಡೆದದ್ದೇ ಹೊಡೆದದ್ದು.

ಇನ್ನೊಬ್ಬ ಗಮನ ಸೆಳೆದ ವ್ಯಕ್ತಿಯೆಂದರೆ ಪಂಚಾಯತ್ ಅಧ್ಯಕ್ಷರು. ಅವರಿಗೆ ಎಲ್ಲಿ ವಿನಾಕಾರಣ ಗಲಭೆಯಾಗುತ್ತದೋ ಎಂಬ ಆತಂಕ. ಗಲಭೆಯಾದರೆ ಮುಂದಿನ ಚುನಾವಣೆಯಲ್ಲಿ ಅವರಿಗೆ ಪಾರ್ಟಿಯಿಂದ ಟಿಕೇಟು ಸಿಗುವುದು ಅನುಮಾನ. ಪೊಲೀಸು ವ್ಯಾನ್ ಅಲ್ಲಿದೆ ಎನ್ನುವುದೊಂದೇ ಅವರ ಸಮಾಧಾನ. ಅವರ ಕಣ್ಣು ಒಂದೇ ಸವನೆ ಸುತ್ತ ಯಾರನ್ನೋ ಹುಡುಕುತ್ತಿತ್ತು. ಜಿಲ್ಲಾ ಕೇಂದ್ರದಿಂದ ಶಾಲು ಹಾಕಿಕೊಂಡ ಕೆಲವರು ಊರಿಗೆ ಬಂದಿದ್ದಾರೆ ಎನ್ನುವುದು ಅವರಿಗೆ ತಿಳಿದ ವಿಷಯ. ಆದರೆ ಅವರು ಯಾರೂ ಗುಂಪಿನಲ್ಲಿ ಕಂಡಿರಲಿಲ್ಲ.

ಅರ್ಚಕರು ಪೂಜೆಯ ಪರಿಕರಗಳನ್ನು ಸಿದ್ಧಪಡಿಸಿ ತೆಗೆದುಕೊಂಡು ಬಂದು ಬಾವಿಯ ನೀರಿನಲ್ಲಿ ಸ್ನಾನ ಮಾಡಿ ಅಶ್ವತ್ಥದ ಕಟ್ಟೆಯ ಮೇಲೆ ತಾವೇ ಮನೆಯಿಂದ ತಂದಿದ್ದ ದೇವರ ಮೂರ್ತಿಯನ್ನಿಟ್ಟು ಹೂವಿನ ಮಾಲೆಗಳನ್ನು ಹಾಕಿ ಪೂಜೆಗೆ ಕುಳಿತರು. ಸುಮಾರು ಒಂದು ಗಂಟೆಯ ಕಾಲ ಅವರ ಪೂಜೆಯ ಕಾರ್ಯಕ್ರಮ ಸಾಂಗವಾಗಿ ನಡೆಯಿತು. ಅವರು ಹೇಳಿದ ಮಂತ್ರಗಳು ಯಾರ ಕಿವಿಗೆ ಬಿದ್ದುವೋ ಗೊತ್ತಿಲ್ಲ. ಎಲ್ಲರೂ ಪರಸ್ಪರ ಹರಟೆ ಕೊಚ್ಚುವುದರಲ್ಲಿಯೇ ಮಗ್ನರಾಗಿದ್ದರು. ಆ ಮೇಲೆ ಮಂಗಳಾರತಿಯೂ ಧಾಳಾಗಿ ನಡೆಯಿತು. ಅದಕ್ಕೆ ಮಾತ್ರ ಸಮಸ್ತರೂ ಕೈ ಜೋಡಿಸಿ ನಿಂತಿದ್ದರು. ಆರತಿ ಹತ್ತಿರ ಬಂದಾಗ ಅದನ್ನು ನಿವಾಳಿಸಿಕೊಂಡು ತಟ್ಟೆಗೆ ಹಣ ಹಾಕಲು ಮರೆಯಲಿಲ್ಲ.

ಪೂಜೆ ಆಗುತ್ತಿರುವಾಗ ಅಲ್ಲಿಟ್ಟ ಪ್ರಸಾದದ ಪರಿಮಳಕ್ಕೆ ಮರದ ಪೊಟರೆಯೊಳಗಿನಿಂದ ಒಂದು ಹಾವು ಹೊರಗೆ ಬಂತು. ಅದನ್ನು ನೋಡಿ ಜನರೆಲ್ಲ ಹೌಹಾರಿದರು. ಒಂದಷ್ಟು ಗೊಂದಲವೂ ಆಯಿತು. ಆದರೆ ಎಲ್ಲರೂ ಹರಸಾಹಸ ಪಟ್ಟು ಅದನ್ನು ದೂರ ಓಡಿಸುವುದರಲ್ಲಿ ಯಶಸ್ವಿಯಾದರು. ಆ ಮೇಲೆ ಪ್ರಸಾದದ ವಿತರಣೆಯೂ ಸಾಂಗವಾಗಿ ನಡೆಯಿತು. ಇಷ್ಟೆಲ್ಲ ಆದ ಮೇಲೆ ಫಾರೆಸ್ಟ್ ಗಾರ್ಡನಿಗೆ ಕರೆ ಹೋಯಿತು. ಮೂಸಬ್ಬನ ಅಂಗಡಿಯಲ್ಲಿ ಬೀಡಿ ಸೇದುತ್ತಾ ಕೂತಿದ್ದ ಗಾರ್ಡ್ ಕೊಡಲಿ ಎತ್ತಿಕೊಂಡು ಎದ್ದು ಬಂದ. ಮೂಸಬ್ಬನೂ ಅವನ ಹಿಂದೆಯೇ ಬಂದ.

ಆದರೆ ಮರಕಡಿಯಲು ಅವನು ಕೊಡಲಿ ಮಾತ್ರ ಎತ್ತಲಿಲ್ಲ. ದೇವರಿರುವ ಮರ ಅದು. ಅದನ್ನು ಕಡಿದು ನಾನು ಯಾವ ರೌರವ ನರಕಕ್ಕೆ ಹೋಗಲಿ ಎಂದು ಅವನು ಪಟ್ಟು ಹಿಡಿದು ಕೂತ. ಅನೇಕರು ಅನೇಕ ರೀತಿಯಲ್ಲಿ ಅವನನ್ನು ಪುಸಲಾಯಿಸಲು ಪ್ರಯತ್ನಿಸಿದರು. ಆದರೆ ಅವನದ್ದು ಒಂದೇ ಹಟ. ಯಾರೋ 'ಮತ್ತೆ ನೀನು ಕೊಡಲಿ ತಂದದ್ದು ಯಾಕಯ್ಯ?' ಎಂದು